## ಕಟ್ಟಿದವರದೇ ಕಥಾನಕ



ನಿರ್ದೇಶಕಿ ಖದಿಜಾ–ಅಲ್–ಸಲಾಮಿ

ಖದಿಜಾಅಲ್‌ಸಲಾಮಿ ಯೆಮೆನ್‌ನ ರಾಜಧಾನಿಯಲ್ಲಿ ಹುಟ್ಟಿದವರು. ಅಪ್ಪ–ಅಮ್ಮ ವಿವಾಹ ವಿಚ್ಛೇದನ ಪಡೆದ ಮೇಲೆ ಅಮ್ಮನ ಮಡಿಲೇ ಆಸರೆಯಾಯಿತು. 11ನೇ ವಯಸ್ಸಿಗೆ ಚಿಕ್ಕಪ್ಪ ಬಲವಂತವಾಗಿ ಮದುವೆ ಮಾಡಿದ. ಪತಿಯಿಂದ ಅತ್ಯಾಚಾರಕ್ಕೊಳಗಾದ ಖದಿಜಾ ಎಲ್ಲಾ ಭವಬಂಧನಗಳನ್ನೂ ಕಳಚಿಕೊಂಡು ಅಮ್ಮನ ಮಡಿಲನ್ನೇ ಮತ್ತೆ ಸೇರಿದರು. ಟೀವಿ ವಾಹಿನಿಯಲ್ಲಿ ಅರೆಕಾಲಿಕ ಕೆಲಸ ಗಿಟ್ಟಿಸಿಕೊಂಡು, ಓದನ್ನು ಮುಂದುವರಿಸಿದರು. ಅಮೆರಿಕದಲ್ಲಿ ಸೆಕೆಂಡರಿ ಸ್ಕೂಲ್ ಕಲಿಯಲು ವಿದ್ಯಾರ್ಥಿ ವೇತನ ಸಿಕ್ಕಿತು. ವಾಷಿಂಗ್ಟನ್‌ನಲ್ಲಿ ಸಂವಹನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದದ್ದೂ ದೊಡ್ಡ ಸಾಧನೆ. ತನ್ನ ಕಲಿಕೆಯ ಥೀಸೀಸ್ ಆಗಿ ಈ ಚಿತ್ರ ಸಿದ್ಧಪಡಿಸುವ ಸಾಹಸಕ್ಕೆ ಅವರು ಮುಂದಾದರು. ಹಲವು ನಿರ್ಮಾಣ ಸಂಸ್ಥೆಗಳನ್ನು ಒಪ್ಪಿಸಿ ಹಣ ಕೂಡಿಸಿದರು.

ಚಿತ್ರಕತೆ ಬರೆಯುವಾಗಲೇ ಯೆಮೆನ್‌ನಲ್ಲಿ ಚಿತ್ರೀಕರಣ ನಡೆಸುವ ಮೊದಲು ಏನೆಲ್ಲಾ ಎಚ್ಚರಿಕೆ ತೆಗೆದುಕೊಳ್ಳಬೇಕು ಎಂಬ ಸ್ಪಷ್ಟತೆ ಅವರಿಗಿತ್ತು. ಯೆಮೆನ್‌ನಲ್ಲಿ ಪೂರ್ಣಪ್ರಮಾಣದ ಸಿನಿಮಾ ಚಿತ್ರೀಕರಣ ಅದಕ್ಕೂ ಮೊದಲು ನಡೆದೇ ಇರಲಿಲ್ಲ. ನ್ಯಾಯಾಲಯದ ಅನುಮತಿ ಪಡೆಯುವ ಸಂದರ್ಭದಲ್ಲಿ ಅವರು ಒಂದು ಸಣ್ಣ ಸುಳ್ಳನ್ನೂ ಹೇಳಿದ್ದರು. ‘ನಾನು ವಿವಾಹ ವಿಚ್ಛೇದನ ಪಡೆಯುವ ನಾಯಕಿಯ ಕತೆಯ ಸಿನಿಮಾ ಮಾಡುತ್ತಿದ್ದೇನೆ’ ಎಂದು ತಿಳಿಸಿದ್ದೇ ಈ ಸುಳ್ಳು. ಒಂದು ವೇಳೆ ಅವರು ಹತ್ತು ವರ್ಷದ ಬಾಲಕಿ ವಿವಾಹ ವಿಚ್ಛೇದನ ಪಡೆಯುವ ಕಥಾನಕ ಇದು ಎಂದು ಹೇಳಿದ್ದಿದ್ದರೆ ಪೀಕಲಾಟಕ್ಕೆ ಸಿಲುಕುವ ಸಾಧ್ಯತೆ ಇತ್ತು. ಆದರೂ ಕೆಲವು ಸಂದರ್ಭಗಳಲ್ಲಿ ದುಷ್ಕರ್ಮಿಗಳು ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು, ತಾಂತ್ರಿಕ ವರ್ಗಕ್ಕೆ ಕಿರುಕುಳ ಕೊಡುವುದನ್ನು ಮಾಡಿದರು. ಎಲ್ಲಾ ಅಡೆತಡೆಗಳನ್ನು ಮೀರಿ ಖದಿಜಾ ತಮ್ಮ ಥೀಸೀಸ್ ರೂಪದ ಈ ಸಿನಿಮಾ ಮುಗಿಸಿದರು.

‘ನನ್ನದೇ ಆತ್ಮಕತೆಯ ಮರುಸೃಷ್ಟಿ ಭಾವನಾತ್ಮಕವಾಗಿಯೂ ಕಷ್ಟ; ಪ್ರಾಯೋಗಿಕವಾಗಿಯೂ ಕಷ್ಟ. ಈ ಸಿನಿಮಾ ಮಾಡುವುದು ಹುಚ್ಚು ಸಾಹಸ ಎಂದು ಗೊತ್ತಿತ್ತು. ಮಾಡಿದ ಮೇಲೆ ಏನೋ ಸಮಾಧಾನ. ಯೆಮೆನ್‌ನ ಹಳ್ಳಿ ಹಳ್ಳಿಗಳಲ್ಲೂ ಇದನ್ನು ತೋರುವುದು ನನ್ನ ಕನಸು. ಅದು ನನಸಾದರೆ ನನ್ನ ಈ ಯತ್ನಕ್ಕೆ ಸಾರ್ಥಕ್ಯ ಸಿಕ್ಕಂತೆ’ ಎಂದು ಖದಿಜಾ ಹೇಳಿದ್ದರು. ಅವರ ಕನಸು ಇನ್ನೂ ಪೂರ್ತಿ ನನಸಾಗಿಲ್ಲವಾದರೂ ಈ ಚಿತ್ರ ನೋಡಿದ ವಿದೇಶೀಯರು ಕೂಡ ಎದ್ದುನಿಂತು ಚಪ್ಪಾಳೆ ತಟ್ಟುತ್ತಿದ್ದಾರೆ.

ಚಿತ್ರ: ಐ ಆಮ್ ನೊಜೂಮ್, ಏಜ್ 10 ಅಂಡ್ ಡಿವೋರ್ಸ್ಡ್
ನಿರ್ದೇಶಕಿ: ಖದಿಜಾ–ಅಲ್–ಸಲಾಮಿ
ನಿರ್ಮಾಣ: ಯೆಮೆನ್, ಫ್ರೆಂಚ್ ಹಾಗೂ ಯುಎಇಯ ಹಲವು ಚಿತ್ರ ನಿರ್ಮಾಣ ಸಂಸ್ಥೆಗಳು
ಹೆಗ್ಗಳಿಕೆ: ‘ಅಕಾಡೆಮಿ’ ಪ್ರಶಸ್ತಿಗೆ ಕಳುಹಿಸಿಕೊಟ್ಟ ಯೆಮೆನ್ ದೇಶದ ಮೊದಲ ಸಿನಿಮಾ